ದಿನಾಂಕ 09.06.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ದೂರಿನ ಯಥಾ ನಕಲನ್ನು ನಿಪಿ-1, ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು ನಿಪಿ-2, ಶವ ತನಿಖಾ ವರದಿಯ ಯಥಾ ನಕಲನ್ನು ನಿಪಿ-3, ಕೃತ್ಯ ಸ್ಥಳದ ಪಂಚನಾಮೆಯ ಯಥಾ ನಕಲನ್ನು ನಿಪಿ-4, 2 ಅಮಾನತು ಪಂಚನಾಮೆಗಳ ಯಥಾ ನಕಲುಗಳನ್ನು ಕ್ರಮವಾಗಿ ನಿಪಿ-5 ಮತ್ತು ನಿಪಿ-6, ಕೃತ್ಯ ಸ್ಥಳದ ಕಚ್ಚಾ ನಕ್ಷೆಯ ಯಥಾ ನಕಲನ್ನು ನಿಪಿ-7, ಐ.ಎಂ.ವಿ ವರದಿಯ ಯಥಾ ನಕಲನ್ನು ನಿಪಿ-8, ದೋಷಾರೋಪಣಾ ಪಟ್ಟಿಯ ಯಥಾ ನಕಲನ್ನು ನಿಪಿ-9, ನನ್ನ ಹಾಗೂ ನನ್ನ ಮಗನ ಆಧಾರ್ ಕಾರ್ಡ್‌ಗಳ ನೋಟರೈಸ್ಡ್ ಪ್ರತಿಗಳನ್ನು ಕ್ರಮವಾಗಿ ನಿಪಿ-10 ಹಾಗೂ ನಿಪಿ-11, ಪಿ.ಎಂ ವರದಿಯ ಯಥಾ ನಕಲನ್ನು ನಿಪಿ-12 ಎಂದು ಗುರುತಿಸಲಾಯಿತು. ಅರ್ಜಿಯನ್ನು ಪುರಸ್ಕರಿಸುವಂತೆ ಕೋರುತ್ತೇನೆ.

ನಿಪಿ-10 ಹಾಗೂ ನಿಪಿ-11 ರ ಮೂಲ ದಾಖಲೆಗಳನ್ನು ಸಾಕ್ಷಿದಾರರು ಹಾಜರುಪಡಿಸಿದ್ದು, ಅವುಗಳನ್ನು ಮೂಲ ದಾಖಲೆಗಳೊಂದಿಗೆ ತಾಳೆ ನೋಡಿ ಮೂಲ ದಾಖಲೆಗಳು ಸಾಕ್ಷಿದಾರರ ದೈನಂದಿಕ ಕಾರ್ಯಗಳಿಗೆ ಅವಶ್ಯಕತೆ ಇದೆ ಎಂದು ಹೇಳಿದ ಕಾರಣ ಮೂಲ ದಾಖಲೆಗಳನ್ನು

ಅವಶ್ಯಕತೆ ಇದ್ದ ಪಕ್ಷದಲ್ಲಿ ಹಾಜರುಪಡಿಸುವ ಷರತ್ತಿಗೊಳಪಡಿಸಿ ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು.

ಪಾಟೀ ಸವಾಲು 2 ನೇ ಎದುರುದಾರರ ಪರ ವಕೀಲರಿಂದಃ-

ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಅಪಘಾತವಾದ ಒಂದು ವಾರದೊಳಗಾಗಿ ಪೊಲೀಸರು ನನ್ನ ವಿಚಾರಣೆ ಮಾಡಿರುತ್ತಾರೆ. ನನ್ನ ಗಂಡನ ಬೈಕಿಗೆ ಅಪಘಾತಪಡಿಸಿದೆ ಎಂದು ಹೇಳಲಾದ ಬೈಕನ್ನು ನಾನು ಇದುವರೆವಿಗೂ ನೋಡಿಲ್ಲ. ನನ್ನ ಗಂಡ ತನ್ನ ಗಂಡನ ಬೈಕನ್ನು ಚಾಲನೆ ಮಾಡುತ್ತಿದ್ದರು. ನನ್ನ ಗಂಡನ ಚಾಲನಾ ಪರವಾನಗಿ ಇದ್ದು ಅದನ್ನು ನಾನು ನೋಡಿರುತ್ತೇನೆ. ನನಗೆ ಚಾಲನಾ ಪರವಾನಗಿಯ ಸಂಖ್ಯೆ ಗೊತ್ತಿರುವುದಿಲ್ಲ. ಸದರಿ ಪರವಾನಗಿಯನ್ನು ಯಾವ ಆರ್.ಟಿ.ಓ ಕಛೇರಿಯಿಂದ ನೀಡಲಾಗಿದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಬೈಕಿಗೆ ವಿಮೆಯಿದ್ದು ಅದು ಯಾವ ಕಂಪನಿಯದ್ದು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಗಂಡ ಚಾಲನೆ ಮಾಡುತ್ತಿದ್ದ ಬೈಕ್ ಸಂಪೂರ್ಣವಾಗಿ ಜಖಂಗೊಂಡಿತ್ತು ಎನ್ನುವುದು ನಿಜ.

2. ಈ ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ಮಗ ಅಪಘಾತವಾದ ಒಂದು ವಾರದೊಳಗಾಗಿ ದೂರನ್ನು ಕೊಟ್ಟಿರುತ್ತಾನೆ. ರವಿ ತಂದೆ ಗಂಗಾಧರಯ್ಯ ನನ್ನ ಭಾವ. ಅಪಘಾತವನ್ನು ಸಾರ್ವಜನಿಕರು ನೋಡಿದ್ದು ಅವರ ಹೆಸರನ್ನು ಹೇಳಲು ನನಗೆ ಗೊತ್ತಿಲ್ಲ. ನನ್ನ ಗಂಡನ ಬೈಕಿಗೆ ಡಿಕ್ಕಿಪಡಿಸಿದ ಬೈಕನ್ನು ಚಾಲನೆ ಮಾಡುತ್ತಿದ್ದವನ ಹೆಸರು ಮಂಜು ಎಂದು

ಇದ್ದು ಆತ ಪುಟ್ಟಪ್ಪನದೊಡ್ಡಿಯವನು. ನಮ್ಮೂರಿಗೂ ಹಾಗೂ ಪುಟ್ಟಪ್ಪನದೊಡ್ಡಿಗೂ ಎಷ್ಟು ಅಂತರವಿದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

3. ಅಪಘಾತವು ದಿನಾಂಕ 07.04.2021 ರಂದು ಸಂಭವಿಸಿದ್ದು ನನ್ನ ಗಂಡ ದಿನಾಂಕ 24.04.2021 ರಂದು ಮೃತಿಯಾಗಿರುತ್ತಾರೆ. ನನ್ನ ಗಂಡ ದಿನಾಂಕ 07.04.2021 ರಿಂದ ದಿನಾಂಕ 24.04.2021 ರವರೆಗೆ ನಿಮ್ಹಾನ್ಸ್ ನಲ್ಲಿದ್ದರು. ಸದರಿ ಅವಧಿಯಲ್ಲಿ ಅಲ್ಲಿನ ವೈದ್ಯರಿಗೆ ಅಪಘಾತ ಯಾವ ರೀತಿ ಸಂಭವಿಸಿತ್ತು ಎನ್ನುವ ಬಗ್ಗೆ ನಾವು ತಿಳಿಸಿರುತ್ತೇವೆ. ಈ ಅವಧಿಯಲ್ಲಿ ನನ್ನ ಗಂಡ ನಿಮ್ಹಾನ್ಸ್ ನಲ್ಲಿ ದಾಖಲಾಗಿದ್ದರು ಎನ್ನುವ ಸಂಬಂಧ ನಾನು ದಾಖಲೆ ಹಾಜರುಪಡಿಸಿದ್ದೇನೆ. ನನ್ನ ಗಂಡನನ್ನು ನಿಮ್ಹಾನ್ಸ್ ನಲ್ಲಿ ದಾಖಲಿಸುವ ಪೂರ್ವದಲ್ಲಿ ಚನ್ನಪಟ್ಟಣದ ಬಿ.ಜಿ ಲಿಂಗೇಗೌಡ ಆಸ್ಪತ್ರೆಗೆ ದಾಖಲಿಸಿದ್ದೆವು. ಅಪಘಾತ ಹೇಗೆ ಸಂಭವಿಸಿತು ಎನ್ನುವ ಬಗ್ಗೆ ಚನ್ನಪಟ್ಟಣದ ಆಸ್ಪತ್ರೆಯಲ್ಲೂ ನಾವು ವೈದ್ಯರಿಗೆ ತಿಳಿಸಿದ್ದೆವು. ಸದರಿ ಆಸ್ಪತ್ರೆಗೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನನ್ನ ಗಂಡನಿಗೆ ಬಿ.ಪಿ. ಅಥವಾ ಮಧುಮೇಹ ಖಾಯಿಲೆ ಇರಲಿಲ್ಲ.

4. ನಿಪಿ-12 ಪಿ.ಎಂ ವರದಿಯಲ್ಲಿ ನನ್ನ ಗಂಡ ಹೃದಯಾಘಾತದಿಂದ ಮರಣ ಹೊಂದಿದ್ದಾರೆಂದು ಬರೆಯಲಾಗಿದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ದಿನಾಂಕ 07.04.2021 ರಿಂದ ದಿನಾಂಕ 24.04.2021 ರ ಅವಧಿಗೆ ಸಂಬಂಧಿಸಿದ ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸದ ಕಾರಣ ನನ್ನ ಗಂಡ ನಾನು ಹೇಳುತ್ತಿರುವ ಅಪಘಾತದಿಂದ ಮೃತ ಹೊಂದಿಲ್ಲ ಎನ್ನುವುದು ಸರಿಯಲ್ಲ. ದಿನಾಂಕ

07.04.2021 ರಂದು ನನ್ನ ಗಂಡ ಬೈಕನ್ನು ಚಾಲನೆ ಮಾಡುವಾ ಆಯತಪ್ಪಿ ಬಿದ್ದು ಅಪಘಾತ ಸಂಭವಿಸಿದ್ದು ದಿನಾಂಕ 22.04.2021 ರಂದು ಎಂ.ಜಿ.ರವಿ ರವರು ನನ್ನ ಗಂಡನಿಗೆ 1 ನೇ ಎದುರುದಾರರ ಬೈಕಿನಿಂದ ರಸ್ತೆ ಅಪಘಾತವಾಗಿದೆ ಎಂದು ಪರಿಹಾರ ಕೊಡಿಸುವ ಉದ್ದೇಶಕ್ಕಾಗಿ ಸುಳ್ಳು ದೂರನ್ನು ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ನನ್ನ ಭಾವ ಎಂ.ಜಿ.ರವಿ ಹಾಗೂ 1 ನೇ ಎದುರುದಾರರು ಸ್ನೇಹಿತರು ಎನ್ನುವುದು ನಿಜ. ದಿನಾಂಕ 07.04.2021 ರಿಂದ ದಿನಾಂಕ 24.04.2021 ರ ಅವಧಿಗೆ ಸಂಬಂಧಿಸಿದ ವೈದ್ಯಕೀಯ ದಾಖಲೆಗಳನ್ನು ನಾನು ಹಾಜರುಪಡಿಸಬಹುದು.

5. ನನ್ನ ಬಳಿ ನಮ್ಮ ಕುಟುಂಬದ ಪಡಿತರ ಚೀಟಿ ಇರುತ್ತದೆ. ನನ್ನ ಗಂಡನ ಚುನಾವಣಾ ಗುರುತಿನ ಚೀಟಿ, ಆಧಾರ್ ಕಾರ್ಡ್ ಹಾಗೂ ನಮ್ಮ ಕುಟುಂಬದ ಪಡಿತರ ಚೀಟಿಯನ್ನು ನಾನು ಹಾಜರುಪಡಿಸಬಹುದು. ನನ್ನ ಪ್ರಮಾಣಪತ್ರದಲ್ಲಿ ನನ್ನ ಗಂಡನಿಗೆ 55 ವರ್ಷ ವಯಸ್ಸಾಗಿತ್ತು ಎಂದು ಬರೆಸಿದ್ದು ಈ ಸಂಬಂಧ ಆಧಾರ್ ಕಾರ್ಡಿರುತ್ತದೆ. ನನ್ನ ಗಂಡ ಇದೇ ಅಪಘಾತದಿಂದ ಮರಣ ಹೊಂದಿದ್ದಾರೆಂದು ಹೇಳುವ ಸಂಬಂಧ ನನ್ನ ಗಂಡನಿಗೆ ಚಿಕಿತ್ಸೆ ನೀಡಿರುವ ವೈದ್ಯರನ್ನು ನಾವು ವಿಚಾರಣೆ ಮಾಡಬಹುದು. ನನ್ನ ಪ್ರಮಾಣಪತ್ರದ 3 ನೇ ಖಂಡಿಕೆಯಲ್ಲಿ ನನ್ನ ಗಂಡನ ಶವವನ್ನು ಆ್ಯಂಬ್ಯುಲೆನ್ಸ್ ನಲ್ಲಿ ತರಲು, ಅವರ ಉತ್ತರ ಕ್ರಿಯಾದಿ ಕಾರ್ಯಗಳನ್ನು ನೆರವೇರಿಸಲು ಹಾಗೂ ಆಸ್ಪತ್ರೆಯ ಖರ್ಚಿಗಾಗಿ 3,10,000/- ರೂಗಳನ್ನು ಖರ್ಚು ಮಾಡಿರುವುದಾಗಿ ಹೇಳಿರುವ ಸಂಬಂಧ ದಾಖಲೆ ಇರುತ್ತದೆ.

6. 2 ನೇ ಅರ್ಜಿದಾರರು ದ್ವಿತೀಯ ಪಿ.ಯು.ಸಿ ಓದಿದ್ದು ಈಗ

ಮನೆಯಲ್ಲಿರುತ್ತಾರೆ. ಆತನಿಗೆ ಮದುವೆಯಾಗಿಲ್ಲ. ನಮ್ಮ ಕುಟುಂಬದ ಪಡಿತರ ಚೀಟಿಯಲ್ಲಿ ಆತನ ಹೆಸರಿದೆ. ಆತನಿಗೆ ಮದುವೆಯಾಗಿದ್ದು ಆತ ಪ್ರತ್ಯೇಕವಾಗಿ ವಾಸವಾಗಿರುವ ಕಾರಣ ನಾನು ನಮ್ಮ ಕುಟುಂಬದ ಪಡಿತರ ಚೀಟಿಯನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ.

7. ನಮ್ಮ ಕುಟುಂಬದ ಬಿ.ಪಿ.ಎಲ್ ಕಾರ್ಡಿರುತ್ತದೆ. ನನ್ನ ಗಂಡನಿಗೆ ಮಾಸಿಕ 25,000/- ರೂಗಳ ವರಮಾನವಿತ್ತು ಎಂದು ಸಾಬೀತುಪಡಿಸುವ ಸಂಬಂಧ ನನ್ನ ಬಳಿ ದಾಖಲೆ ಇರುತ್ತದೆ. ನನ್ನ ಗಂಡ ವ್ಯವಸಾಯ ಅಥವಾ ರೇಷ್ಮೆ ವ್ಯಾಪಾರ ಅಥವಾ ಹೈನುಗಾರಿಕೆ ಮಾಡುತ್ತಿರಲಿಲ್ಲ ಎನ್ನುವುದು ಹಾಗೂ ಅವರಿಗೆ ಯಾವುದೇ ಆದಾಯವಿರಲಿಲ್ಲ ಎನ್ನುವುದು ಹಾಗೂ ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶಕ್ಕಾಗಿ ನಾನು, 1ನೇ ಎದುರುದಾರರು ಹಾಗೂ ಪೊಲೀಸರು ಶಾಮೀಲಾಗಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.